ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ ಕೆಆರ್ ಎನ್ ಎಸ್ - 19

3ನೇ ವರ್ಷ 26ನೇ ಸಂಚಿಕೆ ಕೊಪ್ಪ 3-3-1985 ಭಾನುವಾರ ಬೆಲೆ 40 ಪೈಸೆ

ಕ್ಷೇತ್ರಕ್ಕೆ ರಾಮಕೃಷ್ಣ ಹೆಗ್ಡೆ ಭೇಟಿ: ಉಕ್ಕಿ ಹರಿದ ಜನರ ಉತ್ಸಾಹ

ಕೊಪ್ಪ: ಚುನಾವಣಾ ಪ್ರಚಾರಕ್ಕಾಗಿ ಫೆ. 27 ರಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕ್ಷೇತ್ರಕ್ಕೆ ಭೇಟಿ ನೀಡಿದಾಗ ನ.ರಾ.ಪುರ ತಾಲ್ಲೂಕಿನ ಆ ತುದಿಯಿಂದ ಶೃಂಗೇರಿ ತಾಲ್ಲೂಕಿನ ಈ ತುದಿಯವರೆಗೆ ಎಲ್ಲೆಡೆ ಜನರ ಉತ್ಸಾಹ ಉಕ್ಕಿ ಹರಿಯಿತು.

ರೈತರು, ಕಾರ್ಮಿಕರು, ಕೃಷಿ ಕಾರ್ಮಿಕರು, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ವೃದ್ಧರು, ಗರ್ಭಿಣಿ ಮತ್ತು ಬಾಣಂತಿಯರಾದ ಬಡವರು– ಮುಂತಾಗಿ ಸಮಾಜದ ಪ್ರತಿಯೊಂದು ವಿಭಾಗದವರಿಗಾಗಿ ತಮ್ಮ ಸರ್ಕಾರ ಕೈಗೊಂಡಿರುವ ವಿಶಿಷ್ಟ ಕಾರ್ಯಕ್ರಮಗಳನ್ನು, ರಸ್ತೆ-ಸೇತುವೆ, ಕುಡಿವ ನೀರು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಪಡಿತರ ವ್ಯವಸ್ಥೆ, ಮುಂತಾದ ಪ್ರತಿಯೊಂದು ವಿಚಾರದಲ್ಲೂ ತಮ್ಮ ಸರ್ಕಾರ ಜಾರಿಗೊಳಿಸಿದ ಹಲವು – ಹಲವಾರು ಯೋಜನೆಗಳನ್ನು ಪರಿಚಯಿಸಿದ ಹೆಗ್ಗಡೆ, ಕಾಂಗ್ರೆಸ್ಸಿನವರು, ಮುಖ್ಯವಾಗಿ ಪ್ರಧಾನಿ ರಾಜೀವ್ ಗಾಂಧಿ ರಾಜ್ಯ ಸರ್ಕಾರದ ಬಗ್ಗೆ ಮಾಡಿದ, ಮಾಡುತ್ತಿರುವ ಕೆಲವು ಕ್ಷುಲ್ಲಕ ಟೀಕೆಗಳಿಗೆ ಅಂಕಿ–ಸಂಖ್ಯೆಗಳ ಸಮೇತ ಉತ್ತರಿಸಿದರು

ಚುನಾವಣೆ ಮುನ್ನೋಟ: ಜನತಾಕ್ಕೆ ಮೇಲುಗೈ?

ಚುನಾವಣೆ ಹತ್ತಿರ ಬಂದಂತೆ, 'ಯಾರು ಗೆಲ್ಲಬಹುದು ಇಲ್ಲಿ?' ಎಂಬ ಪ್ರಶ್ನೆ ಎಲ್ಲ ಕಡೆ ವಿಹರಿಸುತ್ತಿದೆ. ಚುನಾವಣೆಯ ಬಗ್ಗೆ ನಿರುತ್ಸಾಹ ಹೊದ್ದು ಮಲಗಿದ್ದ ಮತದಾರರ ಕುತೂಹಲವನ್ನು ಮೀಟಿ ಎಬ್ಬಿಸುತ್ತಿದೆ ಈ ಪ್ರಶ್ನೆ.

ಇದಕ್ಕೆ ಉತ್ತರವಾಗಿ ಹಲವು ವಿಧದ ಲೆಕ್ಕಾಚಾರಗಳು ಹೊರಬರುತ್ತವೆ. ಈ ಲೆಕ್ಕಾಚಾರಗಳ ಪ್ರಕಾರ ಕಾಂಗ್ರೆಸ್, ಜನತಾ ಮತ್ತು ಬಿಜೆಪಿ–ಈ ಮೂರು ಪಕ್ಷಗಳ ಅಭ್ಯರ್ಥಿಗಳೂ ಗೆಲ್ಲುವ ಸಾಧ್ಯತೆ ಶೇ. 60ರಷ್ಟಿದೆ !

ಆದರೆ ಯಾರಾದರೊಬ್ಬರು ಮಾತ್ರ ಗೆಲ್ಲಲು ಸಾಧ್ಯವಿರುವುದರಿಂದ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾಗುತ್ತದೆ. ಈ ಪ್ರಶ್ನೆಗೆ ಹಾಗಿರಲಿ, ಯಾವ ಪಕ್ಷಕ್ಕೆ ಮೇಲುಗೈ ಇದೆ ಎಂದು ಹೇಳುವುದು ಸಹ ಕಷ್ಟದ್ದಾಗಿದೆ.

ಟಿಕೆಟ್ ಹೋರಾಟದಲ್ಲೇನೋ ಗೆಲುವು....

ಕಾಂಗ್ರೆಸ್ (ಐ) ನಿಂದ ಟಿಕೆಟ್ ಹೋರಾಟದಲ್ಲಿ ಗೆದ್ದಿರುವ ಯು. ಕೆ. ಶಾಮಣ್ಣ ಹಿಂದೆ ಕೊಪ್ಪ ತಾ|| ಸಹಕಾರ ಸಂಘದ ಅಧ್ಯಕ್ಷರಾಗಿ, ತಾ.ಅ.ಮಂ. ಸದಸ್ಯರಾಗಿ, ಜಿಲ್ಲಾ ಬ್ಯಾಂಕ್ ನಿರ್ದೇಶಕರಾಗಿ ಹಾಗೂ ತಾ|| ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಹಾಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿರುವವರು. ಇಷ್ಟೆಲ್ಲಾ ಆದರೂ ಸಾರ್ವತ್ರಿಕವಾಗಿ ಮತದಾರರಿಗೆ ಅತ್ಯಂತ ಅಪರಿಚಿತರು ಎಂಬುದು ಕಂಡು ಬರುತ್ತದೆ.

2 ತಿಂಗಳ ಹಿಂದಷ್ಟೇ ನಡೆದ ಲೋಕಸಭಾ ಚುನಾವಣೆಯಲ್ಲಿ ವಿರೋಧಿ ಅಭ್ಯರ್ಥಿಗಿಂತ ಕಾಂಗ್ರೆಸ್ಸಿಗೆ 25,000 ಮತಗಳ ಅಂತರ ಈ ಕ್ಷೇತ್ರದಲ್ಲಿ ದಕ್ಕಿದ್ದೇ ಈ ಚುನಾ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲ್ಲಬಹುದೆಂಬ ಆಸೆಯ ಲೆಕ್ಕಾಚಾರಕ್ಕೆ ಮೂಲ ಸೂತ್ರವಾಗಿದೆ.

ನಿರಾಶೆಯಿಂದ 'ಸನ್ಯಾಸ'ಕ್ಕೆ

ಆದರೆ, ತಮಗೇ ಅಥವಾ ತಾವು ಬೆಂಬಲಿಸಿದ ಮುಖಂಡರಿಗೆ ಟಿಕೆಟ್ ಸಿಗದೆ ನಿರಾಶರಾದ ಅತ್ಯಂತ ಪ್ರಮುಖ ಮುಖಂಡರುಗಳೇ ಕ್ಷೇತ್ರಾದ್ಯಂತ ಅಪಾರ ಸಂಖ್ಯೆಯಲ್ಲಿದ್ದಾರೆ. ಈ ಬಗ್ಗೆ ಪಕ್ಷದ ಪ್ರಮುಖರು "ಪೈಪೋಟಿ ಏನಿದ್ದರೂ ಟಿಕೆಟ್ ಘೋಷಣೆಯಾಗುವವರೆಗೆ ಮಾತ್ರ. ಅನಂತರ ಎಲ್ಲರೂ ಒಂದೇ. ವಿರೋಧ ಪಕ್ಷದವನೊಬ್ಬ ಶಾಸಕನಾಗಿ ನಮ್ಮನ್ನು ತುಳಿಯುವುದಕ್ಕಿಂತ ನಮ್ಮವರೊಬ್ಬರು ಗೆಲ್ಲುವುದು ಎಲ್ಲರಿಗೂ ಬೇಕಾಗಿರುತ್ತೆ. ಆದ್ದರಿಂದ ಯಾರೂ ಅಭ್ಯರ್ಥಿಯ ಸೋಲಿಗೆ ಕಾರಣವಾಗುವಂತೆ ನಡಕೊಳ್ಳುವುದಿಲ್ಲ" ಎಂದು ಸಮಜಾಯಿಷಿ ಕೊಡುತ್ತಾರೆ.

ಆದರೆ ಪಕ್ಷದೊಳಗೇ ಒಂದು ಬಣ ಇನ್ನೊಂದು ಬಣವನ್ನು ವಿರೋಧ ಪಕ್ಷದವರಿಗಿಂತಲೂ ತೀವ್ರವಾಗಿ ಮಟ್ಟಹಾಕಲು ಯತ್ನಿಸುವುದೂ ಗುಟ್ಟೇನಲ್ಲ. ಆದ್ದರಿಂದ ಮೇಲಿನ ಸಮಜಾಯಿಷಿಗೆ ಬೇಕಾದಷ್ಟು ಪುಷ್ಟಿ ಸಿಗುವುದಿಲ್ಲ.

ಅದಕ್ಕೆ ಸರಿಯಾಗಿ. 'ನಮಗೆಲ್ಲಾ ಯಾಕೆ ಸ್ವಾಮಿ ರಾಜಕೀಯ?' ಎನ್ನುವ 'ಸನ್ಯಾಸಿ'ಗಳು ಅಲ್ಲಿಂದಿಲ್ಲಿಗೂ ಕಂಡು ಬರುತ್ತಿದ್ದಾರೆ. ಇವರೆಲ್ಲಾ ಅತೃಪ್ತರೆಂದೇನೂ ಹೇಳಿಕೊಳ್ಳುವುದಿಲ್ಲ. ಬಹಿರಂಗವಾಗಿ ಪ್ರಚಾರದಲ್ಲಿ ಭಾಗವಹಿಸಬಹುದು. ಆದರೂ....

'ಸೆಂಟ್ ಪರ್ಸೆಂಟ್' ಎಂಬ ಗೆಲುವಿನ ಆಶಾವಾದ ಮಾತ್ರ ಕಾಂಗ್ರೆಸ್ ವಲಯದಲ್ಲಿ ಎಲ್ಲೂ ಕಂಡು ಬರುತ್ತಿಲ್ಲ. ಎಲ್ಲೂ ಪರ್ಸೆಂಟೇಜಿನ ಲೆಕ್ಕಾಚಾರ 60–65 ಕ್ಕಿಂತ ಮುಂದೆ ಹೋಗುವುದಿಲ್ಲ. 'ಶೃಂಕೊಸ' ಬರೆದಿರುವಂತೆ, "ಈ ಚುನಾವಣೆಯಲ್ಲಿ ಸೋಲಾಗಲೀ ಗೆಲುವಾಗಲೀ ಕಾಂಗ್ರೆಸ್ ಪಕ್ಷದ್ದು ಹೊರತು ಶಾಮಣ್ಣನವರದ್ದಲ್ಲ."

ಜನತಾದಲ್ಲಿ ಲವಲವಿಕೆ

ಜನತಾ ಪಕ್ಷದೊಳಗೇ ಹೆಚ್ಚು ಲವಲವಿಕೆ, ಹೆಚ್ಚು ಛಲವಂತಿಕೆ ಕಂಡುಬರುತ್ತಿದೆ. ಬಿಜೆಪಿ ಕಾರ್ಯಕರ್ತರೊಂದಿಗೆ ಒಂಥರಾ ಒಲ್ಲದ ಮನಸ್ಸಿನ ಹೊಂದಿಕೆ ಮಾಡಿಕೊಂಡು ತೊಳಲಾಡುತ್ತಿದ್ದ ಪರಿಸ್ಥಿತಿ ಈಗ ಇಲ್ಲದ್ದರಿಂದ, ಪಕ್ಷದ ಖಾಯಂ ನಿಷ್ಠರು ಮಾತ್ರ ಉಳಿದು ಕೊಂಡಿರುವುದರಿಂದ ಸಲೀಸಾಗಿ ಪ್ರಚಾರ ಕಾರ್ಯ ಸ್ವಯಂ ಸ್ಫೂರ್ತಿಯಿಂದ ನಡೆಯುತ್ತಿರುವುದು ಕಂಡು ಬರುತ್ತದೆ. ಆದರೆ ಪ್ರಚಾರದ ಅಬ್ಬರವನ್ನು ನೋಡಿದರೆ, ತಮ್ಮ ಗೆಲುವಿನ ಬಗ್ಗೆ ಆಳವಾದ ಸಂಶಯವಿದೆಯೇನೋ ಎಂಬ ಅನುಮಾನವೂ ತಟ್ಟನೆ ಬರುತ್ತದೆ.

ದಲಿತರ, ಕಮ್ಯುನಿಸ್ಟರ ಬೆಂಬಲ

ಜೊತೆಗೆ, ಸ್ಥಾನ ಹೊಂದಾಣಿಕೆಯ ವಿಷಯದಲ್ಲಿ ರಾಜ್ಯ ಜನತಾ ನಾಯಕತ್ವದೊಡನೆ ಅಸಮಾಧಾನವಿದ್ದೂ ಸಿಪಿಐ ಪಕ್ಷದ ಇದ್ದ ಬದ್ದ ಬೆಂಬಲ ಸಂಪೂರ್ಣವಾಗಿ ಈ ಪಕ್ಷಕ್ಕಿದೆ. ಸಿಪಿಎಂ ಈ ಕ್ಷೇತ್ರದಲ್ಲಿ ಇಲ್ಲವೇ ಇಲ್ಲವೆಂಬಷ್ಟು ಕ್ಷೀಣವಾಗಿದ್ದರೂ ಇರುವ ಕೆಲವೇ ಕೆಲವು ಕಾರ್ಯಕರ್ತರು ಸಾಕಷ್ಟು ಪ್ರಭಾವ ಹೊಂದಿದ್ದು, ಜನತಾ ಪಕ್ಷದ ಗೆಲುವಿಗೆ ಮನಃಪೂರ್ವಕವಾಗಿ ಕೆಲಸ ಮಾಡುತ್ತಿದ್ದಾರೆ. (ಭಿನ್ನಾಭಿಪ್ರಾಯಗಳಿದ್ದರೆ, "ಮತ್ತೆ ಒಂದು ಕೈ ತೋರಿಸುತ್ತೇವೆ") ರೈತಸಂಘದ ಕಾರ್ಯಕರ್ತರಲ್ಲೂ ಹಲವರು ತಮ್ಮ ವೈಯಕ್ತಿಕ ಸಾಮರ್ಥ್ಯವನ್ನು ಪೂರ್ತಿ ಜನತಾಕ್ಕೆ ವಿನಿಯೋಗಿಸುತ್ತಿರುವುದು ಕಂಡುಬರುತ್ತದೆ.

ಇಷ್ಟೇ ಮುಖ್ಯವಾಗಿ, ಕರ್ನಾಟಕ ದಲಿತ ಸಂಘರ್ಷ ಸಮಿತಿಯು ರಾಜ್ಯ ಮಂಡಳಿ ಜನತಾ–ಕಮ್ಯುನಿಸ್ಟ್ ಬಣದ ಪಕ್ಷಗಳನ್ನು ಬೆಂಬಲಿಸುವ ತೀರ್ಮಾನ ತೆಗೆದುಕೊಂಡಿದೆ. ದ.ಸಂ.ಸ.ದ ಶೃಂಗೇರಿ ತಾ|| ಘಟಕ ಚುರುಕಾಗಿದ್ದು ಕೊಪ್ಪ ತಾ|| ನಲ್ಲೂ ಸಂಘಟನೆ ಬೆಳೆಯುತ್ತಿರುವುದರಿಂದ ಈ ದಿಕ್ಕಿನಲ್ಲೂ ಜನತಾ ಪಕ್ಷಕ್ಕೆ ಲಾಭವಾಗಲಿದೆ

ಇನ್ನು ಗೋವಿಂದ ಗೌಡರ ಸಾಧನೆಯ ಬಗೆಗಾದರೂ ತೃಪ್ತಿ-ಅತೃಪ್ತಿ ಎರಡೂ ಜೊತೆ ಜೊತೆಯಾಗಿಯೇ ಪ್ರಚಾರದಲ್ಲಿವೆ. ಆದರೆ ಶುದ್ಧ ಕೈಯವರು, ಢೋಂಗಿತನ, ದರ್ಪ ಇಲ್ಲದವರು, ಸಾಧ್ಯವಿದ್ದಷ್ಟು ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಾರೆ ಎಂಬ ವಿಶ್ವಾಸ ಮಧ್ಯಮ ವರ್ಗದಲ್ಲಿ ಮತ್ತು ಮೇಲ್ವರ್ಗದ ಒಂದು ಭಾಗದವರಲ್ಲಿ ಇದೆ. ಇದರ ಜೊತೆಗೆ ರಾಮಕೃಷ್ಣ ಹೆಗಡೆ ಸರ್ಕಾರದ ನೀತಿ, ಸಾಧನೆ ಮತ್ತು ಉಪಕಾರಗಳ ಬಗ್ಗೆಯೂ ಸಾಕಷ್ಟು ಒಳ್ಳೆಯ ಭಾವನೆ ಪ್ರಚಲಿತದಲ್ಲಿದೆ.

ಬಡ ವರ್ಗದ ಒಲವೆತ್ತ ?

ಆದರೆ ಬಡಬಗ್ಗರ ಅತಿ ಮುಖ್ಯ ಸಮಸ್ಯೆ ಜಮೀನು, ದರ್ಖಾಸ್ತು. ಇದು ಇತ್ಯರ್ಥವಾಗಿ ಬಡವರ್ಗಕ್ಕೆ ಇನ್ನೂ ಭೂಮಿ ಎಲ್ಲೂ ಸಿಕ್ಕಿಲ್ಲ. ಜನತಾ ಮನೆ, ವಿಧವೆಯರ–ಬಾಣಂತಿಯರ ಮಾಸಾಶನದಂಥ ಕೆಲಸಗಳು ಎಷ್ಟು ಮಾಡಿದರೂ ತೃಪ್ತಿದಾಯಕವಾಗಲಾರದಂಥವು.

(ವಾಸ್ತವವಾಗಿ. ಕೊಪ್ಪ ತಾಲ್ಲೂಕೊಂದರಲ್ಲೇ ಸುಮಾರು 5 ಸಾವಿರ ಎಕರೆಗಿಂತಲೂ ಹೆಚ್ಚು–ಶೇ. 60ರಷ್ಟು–ಭೂಮಿಯ ಮಂಜೂರಾತಿ ಕೆಲಸ ಲೋಕಸಭಾ ಚುನಾವಣೆಗೂ ಮುಂಚೆಯೇ ಮುಗಿದಿದೆ. ಆದರೆ ಸರ್ವೆ–ಮರಮಾಲಿಕೆ–ಪಕ್ಕಾ ಪೋಡ್ ಆಗದೆ ಪ್ರಯೋಜನದಾರರಿಗೆ ಭೂಮಿ ಸಿಗುವುದಿಲ್ಲ. ಅವರಿಗೆ ಭೂಮಿ ಮಂಜೂರಾಗಿರುವ ಮಾಹಿತಿ ಕೂಡ ದೊರೆಯುವುದಿಲ್ಲ.

ಇನ್ನೊಂದೆಡೆಯಿಂದ, ಜಮೀನುಳ್ಳವರು ಬೇಲಿ ಹಾಕಿ ಒತ್ತುವರಿ ಮಾಡಿ ಕೊಳ್ಳುವುದರಲ್ಲಿ ಜನತಾ ಪಕ್ಷದ ಬೆಂಬಲಿಗರೆಂದು ಕೊಳ್ಳುವವರೂ ಏನೂ ಕಮ್ಮಿಯವರಲ್ಲ. ಇದು ಭೂರಹಿತ ಬಡವರ ಕಣ್ಣಿಗೆ ಎಲ್ಲೆಲ್ಲೂ ಎದ್ದು ಕಾಣುತ್ತಿದೆ.)

ಜೊತೆಗೆ ಈ ವರ್ಗದವರ ಬಗ್ಗೆ, ಜನತಾ ಪಕ್ಷದ ನಾಯಕರುಗಳ ವರ್ತನೆ–ಮನೋಭಾವಗಳಲ್ಲೂ ಬೇರೆಯವರದಕ್ಕಿಂತ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ.

ಹೀಗಾಗಿ ಈ ವರ್ಗದವರಲ್ಲಿ ಎಷ್ಟು ಜನ ತಾವು ನೇತಾಡುತ್ತಿರುವ ಅಲುವ ಮನೆ ಬಿಟ್ಟು ಈ ಮರಕ್ಕೆ ನೇತು ಬೀಳುತ್ತಾರೆ ಎಂಬುದು ಇನ್ನೂ ಕಾದು ನೋಡಬೇಕಾದ ಅಂಶವಾಗಿದೆ.

ಮೂರನೇ ಸ್ಪರ್ಧಿ

ತ್ರಿಕೋಣ ಸ್ಪರ್ಧೆಯ ಈ ಕ್ಷೇತ್ರದಲ್ಲಿರುವ ಇನ್ನೊಬ್ಬ ಮುಖ್ಯ ಅಭ್ಯರ್ಥಿ ಬಿಜೆಪಿಯ ಎ.ಎಂ.ಶ್ರೀಕಂಠಗೌಡ. ಸ್ನಾತಕೋತ್ತರ ಪದವೀಧರರಾದ ಈ ಯುವ ಹುರಿಯಾಳು ಈವರೆಗೆ ಶೃಂಗೇರಿ ತಾಲ್ಲೂಕಿನ ಒಬ್ಬ ಪ್ರಮುಖ ರಾಜಕೀಯ ಶಕ್ತಿಯಾಗಿದ್ದವರು. ಜನತಾ ಪಕ್ಷದ ಹಳೆ ಹುಲಿಯಾಗಿ, ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಸೇರದ ಸ್ವತಂತ್ರ ರೈತಸಂಘದ ಅಧ್ಯಕ್ಷನಾಗಿ, ಒಳ್ಳೆಯ ನ್ಯಾಯ ನಿಷ್ಠ ಹೋರಾಟಗಾರರಾಗಿ ಜನ ಮೆಚ್ಚುಗೆ ಗಳಿಸಿದ್ದವರು.

ಆದರೆ ವೈಯಕ್ತಿಕ ಅತೃಪ್ತಿಯಿಂದಾಗಿ ಇವರು ಈ ಸಲದ ಲೋಕಸಭಾ ಚುನಾವಣೆಯ ವೇಳೆಗೆ ಪಕ್ಷದಿಂದ ಹೊರಬರುವ ತೀರ್ಮಾನ ಕೈಗೊಂಡಿದ್ದು, ಇವರನ್ನು ಬಿಜೆಪಿ ತನ್ನ ಅಭ್ಯರ್ಥಿಯಾಗಿ ನಿಲ್ಲಿಸಿಕೊಂಡಿದೆ.

ಕಾರ್ಯಕರ್ತರ ಸಂದಿಗ್ಧತೆ

ಬಿಜೆಪಿಯೊಳಗೆ ಹಳೆಯ ಚುನಾವಣಾ ಹೋರಾಟಗಾರ ಶ್ರೀಕಂಠ ಭಟ್, ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ವಿಠಲರಾವ್, ಕ್ಷೇತ್ರದ ಬಿಜೆಪಿಯೊಳಗಿನ ಇನ್ನೊಬ್ಬ ಅತ್ಯಂತ ಪ್ರಭಾವಿ ಮುಖಂಡ ಟಿ.ಎನ್.ಕೃಷ್ಣ ಭಟ್ —ಇವರಂಥ ಘಟಾನುಘಟಿಗಳಿದ್ದೂ ಈ ಪಕ್ಷ ಒಬ್ಬ ಸ್ಪರ್ಧಿಯನ್ನು ಬೇರೆ ಪಕ್ಷದಿಂದ ಆಮದು ಮಾಡಿಕೊಂಡಿರುವ ಸಂಗತಿ ಇದು ಹೇಳಿಕೊಂಡು ಬಂದಿರುವ "ಶುದ್ಧ ರಾಜಕಾರಣ"ದ ಘೋಷಣೆಗೆ ಎಷ್ಟರಮಟ್ಟಿಗೆ ಹೊಂದುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸುವ ಸಂದಿಗ್ಧತೆ ಅದರ ಕಾರ್ಯಕರ್ತರ ಪಾಲಿಗೆ ಬಂದಿದೆ.

(3ನೇ ಪುಟಕ್ಕೆ)

ಸಿದ್ಧರಮಠ ರಥೋತ್ಸವ

ಕೊಪ್ಪ: ಇಲ್ಲಿಗೆ ಸಮೀಪದ ಸಿದ್ಧರಮಠದ ರಥೋತ್ಸವದ ಕಾರ್ಯಕ್ರಮಗಳು ಮಾರ್ಚ್ 5 ರಿಂದ 9ರ ವರೆಗೆ ನಡೆಯಲಿದ್ದು, ಮಾ. 7 ರಂದು ಮಹಾ ರಥೋತ್ಸವ ನಡೆಯುತ್ತದೆ.

ಜಯಪುರದಲ್ಲಿ ಕಾಫಿ ಬೆಳೆ ವಿಚಾರ ಸಂಕಿರಣ

ಕಾಫಿ ಬೆಳೆಗಾರರಿಗೆ — ಮುಖ್ಯವಾಗಿ ಹೊಸದಾಗಿ ಕಾಫಿ ಕೃಷಿ ಕೈಗೊಳ್ಳುತ್ತಿರುವ ಸಣ್ಣ ಬೆಳೆಗಾರರಿಗೆ—ಅತ್ಯಂತ ಉಪಯುಕ್ತವಾದ ವಿಚಾರ ಸಂಕಿರಣವೊಂದು ಜಯಪುರದಲ್ಲಿ ಫೆ. 17 ರಂದು ಏರ್ಪಟ್ಟಿತ್ತು.

ಕೆಲವೇ ತಿಂಗಳ ಹಿಂದೆ ಆರಂಭವಾಗಿರುವ "ಸಹ್ಯಾದ್ರಿ ಕಾಫಿ ಬೆಳೆಗಾರರ ಸಂಘ, ಜಯಪುರ" ಇದರ ಆಶ್ರಯದಲ್ಲಿ ನಡೆದ ಕಾಫಿ ಮಂಡಳಿಯ 'ವಿಸ್ತರಣಾ ಸಹಾಯಧನ' ವಿತರಣಾ ಸಮಾರಂಭದ ಅಂಗವಾಗಿ ಈ ಸಂಕಿರಣ ನಡೆಯಿತು.

ಬಾಳೆಹೊನ್ನೂರಿನ ಸಮೀಪ ಇರುವ ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆಯ ಮೂವರು ತಜ್ಞರು ಇದರಲ್ಲಿ ಪಾಲ್ಗೊಂಡಿದ್ದರು.

ಕೀಟಗಳ ಹತೋಟಿ

ಕಾಫಿ ಬೆಳೆಗೆ ಹಾನಿ ಮಾಡುವ ಕೀಟಗಳು ಮತ್ತು ಸಕಾಲದಲ್ಲಿ ಅವುಗಳ ನಿಯಂತ್ರಣವನ್ನು ಕುರಿತು ಕೀಟ ತಜ್ಞರಾದ ಶ್ರೀಯುತ ಪಿ. ಕೃಷ್ಣಮೂರ್ತಿ ಭಟ್ಟರು ವಿವರಿಸಿದರು.

ಕಾಂಡ ಕೊರೆಯುವ ಹುಳಗಳನ್ನು ನಾಶಪಡಿಸಲು ಸತತವಾಗಿ ಸಂಶೋಧನೆ ನಡೆಯುತ್ತಿದ್ದು, ಅವುಗಳ ನಿಯಂತ್ರಣಕ್ಕೊಳ್ಳರ ಪರೋಪಜೀವಿ ಕೀಟಗಳನ್ನು ಅಭಿವೃದ್ಧಿ ಪಡಿಸಲು ಯತ್ನ ನಡೆಯುತ್ತಿದೆ. ಇದೇ ರೀತಿ ಬಿಳಿ ಮತ್ತು ಹಸಿರು ತಿಗಣೆಗಳಿಗೂ ಸೂಕ್ತವಾದ ಪರೋಪಜೀವಿ ಕೀಟಗಳನ್ನು ಅಭಿವೃದ್ಧಿ ಪಡಿಸಲು ಯತ್ನಿಸಲಾಗುತ್ತಿದೆ. ಕೀನ್ಯಾ ದೇಶದಲ್ಲಿ ಈ ಕ್ರಮದಿಂದ ಬಿಳಿಯ ತಿಗಣೆಗಳನ್ನು ಹತೋಟಿಗೆ ತರಲಾಗಿದೆ. ಆದ್ದರಿಂದ ಹೊರ ದೇಶದಿಂದ ಇಂಥ ಸುಮಾರು 25 ಬಗೆಯ ಪರೋಪಜೀವಿ ಕೀಟಗಳ ತಳಿಗಳನ್ನು ತರಿಸಿ ಅವನ್ನು ಇಲ್ಲಿ ವೃದ್ಧಿಸಲು ಯತ್ನವನ್ನು ಕೈಗೊಳ್ಳಲಾಗಿದೆ ಎಂದು ಶ್ರೀ ಭಟ್ ತಿಳಿಸಿದರು.

ಬೆಳೆಗಾರರ ಪ್ರಶ್ನೆಗೆ ಉತ್ತರಿಸುತ್ತ ಅವರು, ಈ ಪರೋಪಜೀವಿ ಕೀಟಗಳು ಬೆಳೆಗೆ ಯಾವ ಹಾನಿಯನ್ನೂ ಮಾಡದೇ, ಬಾಧಿಸುವ ಕೀಟಗಳನ್ನು ಮಾತ್ರ ನಿಯಂತ್ರಿಸಲು ಸಹಾಯ ಮಾಡುತ್ತವೆ ಎಂದು ಹೇಳಿದರು.

ಕಾಂಡ ಕೊರೆಯುವ ಬೋರರ್ ಹುಳಗಳನ್ನು ನಿಯಂತ್ರಿಸಲು ಲಿಂಡೇನ್–20 ಇ. ಸಿ. (1,300 ಮಿ.ಲೀ.) ಅಥವಾ ಬಿ. ಹೆಚ್ ಸಿ. 50 ಡಬ್ಲ್ಯುಪಿ (4 ಕೆ.ಜಿ.) 200 ಲೀ. ನೀರಿನಲ್ಲಿ ಕರಗಿಸಿ ಅದರ ಜೊತೆಗೆ 200 ಮಿ. ಲೀ. ವೆಟೋಪ್ಲಾಂಟ್ ಅಥವಾ ಸ್ಯಾಂಡೋವಿಟ್ ಸೇರಿಸಿ ಈ ಮಿಶ್ರಣವನ್ನು ಕಾಂಡದ ಮೇಲೆ ಮತ್ತು ದಪ್ಪ ರೆಕ್ಕೆಗಳಿಗೂ ಸರಿಯಾಗಿ ಸವರಬೇಕು. ಈ ಕ್ರಮವನ್ನು ಏಪ್ರಿಲ್–ಮೇ ತಿಂಗಳಲ್ಲಿ ಒಂದು ಸಾರಿ ಮತ್ತು ಸೆಪ್ಟೆಂಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಒಂದು ಅಥವಾ ಎರಡು ಸಾರಿ ಮಾಡಬೇಕು. ಪ್ರಾಯದ ಹುಳ ಗಿಡದ ಕಾಂಡದೊಳಗಿಂದ ಹೊರಗೆ ಬರುವ ಮುನ್ನ ಈ ಕ್ರಮವನ್ನು ತಪ್ಪದೇ ಕೈಗೊಳ್ಳಬೇಕೆಂದರು

ಕಾಫಿ ಗಿಡಗಳ ಬೇರುಗಳನ್ನು ತಿನ್ನುವ 'ಕಾಕ್ ಚಾಪರ್' ಮರಿ ಹುಳಗಳನ್ನು ಗಿಡ ನೆಡುವ ಮುನ್ನ ಕುಣಿ ತೆಗೆಯುವಾಗ ಕಂಡು ಬಂದಲ್ಲಿ ಅವುಗಳನ್ನು ಸಂಗ್ರಹಿಸಿ ನಾಶಪಡಿಸಬೇಕು ಮತ್ತು ದೊಡ್ಡ ಗಿಡಗಳಲ್ಲಿ ಈ ಹುಳಗಳ ಹಾವಳಿ ಕಂಡುಬಂದಲ್ಲಿ, ಅವು ಮಣ್ಣಿನಲ್ಲಿದ್ದರೆ ಕೀಟ ನಾಶಕಗಳನ್ನು ಮಣ್ಣಿನಲ್ಲಿ ಬೆರೆಸುವುದರಿಂದ ಈ ಹುಳಗಳ ಹಾವಳಿಯನ್ನು ತಡೆಗಟ್ಟಬಹುದೆಂದರು.

ಕೀಟನಾಶಕಗಳನ್ನು ಅವಶ್ಯಕತೆ ಇದ್ದಲ್ಲಿ ಮಾತ್ರ ಮತ್ತು ಸರಿಯಾದ ಪ್ರಮಾಣದಲ್ಲಿ, ಸಕಾಲದಲ್ಲಿ ಬಳಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಹೊಸ ತಳಿಗಳು

ರೋಗನಿರೋಧಕ ಶಕ್ತಿಯುಳ್ಳ, ಹೆಚ್ಚು ಇಳುವರಿ ಕೊಡುವ ಹೊಸ ಕಾಫಿ ತಳಿಗಳ ಬಗ್ಗೆ ಜೆಮ್ಷೆಡ್ ಅಹಮದ್ ವಿವರಣೆ ನೀಡಿದರು.

ಅರೇಬಿಕಾ ತಳಿಗಳಲ್ಲಿ ಸೆಲೆಕ್ಷನ್ ನಂ. 795 ಇದನ್ನು ಹಲವಾರು ವರ್ಷಗಳಿಂದ ಉತ್ತಮ ಇಳುವರಿಯ ತಳಿಯಾಗಿ ಬಳಸಲಾಗುತ್ತಿದೆ. ಇದರಲ್ಲಿ 8 ನೇ ನಂಬರಿನ ತಳಿ ಇಳುವರಿ ಸ್ವಲ್ಪ ಕಮ್ಮಿಯಾದರೂ ಬಹುಮಟ್ಟಿಗೆ ಎಲೆರೋಗ ನಿರೋಧಕವಾಗಿದೆ. ಕಾಫಿಯ ಮೂಲವಾದ ಇಥಿಯೋಪಿಯದಿಂದ ಬೀಜ ತರಿಸಿ ಮಿಶ್ರತಳಿ ಮಾಡಿದ ಸೆಲೆಕ್ಷನ್ ನಂ. 9 ಸಹ ಉತ್ತಮವಾಗಿದೆ.

ಸ್ಯಾಂಡೋಮಾನ್ ಎಂಬ ಇನ್ನೊಂದು ತಳಿಯ ಗಿಡ ಹೆಚ್ಚು ಅಗಲವಾಗಿ ಬೆಳೆಯುದೆ, ಒತ್ತಾಗಿ ಹಣ್ಣು ಬಿಡುವಂಥದು. 5 ಅಡಿಗೊಂದರಂತೆ ಇದನ್ನು ನೆಡಬಹುದಾದ್ದರಿಂದ ಎಕರೆವಾರು ಇಳುವರಿ ಹೆಚ್ಚುತ್ತೆ. ರೊಬಸ್ಟಾದ ಮಧ್ಯೆಯೂ ಇದನ್ನು ಅಂತರ ಸಾಲು ಮಾಡಿ ಬೆಳೆಸಬಹುದು. ಇದು ಬೇಗ ಫಲ ಕೊಡುವುದರಿಂದ ರೊಬಸ್ಟಾ ಫಸಲು ಬರುವ ಮೊದಲೇ ಸ್ವಲ್ಪ ಆದಾಯವೂ ಸಿಗುತ್ತದೆ.

ರೊ ಬ ಸ್ಟಾ

ರೊಬಸ್ಟಾ ತಳಿಗಳಲ್ಲಿ 3 ಬಗೆಯವು ಇವೆ. ಅದರಲ್ಲಿ ಸೆಲೆಕ್ಷನ್ 274–ಇದನ್ನು ಸುಮಾರು 30ಕ್ಕೂ ಹೆಚ್ಚು ವರ್ಷಗಳಿಂದ ನೀಡಲಾಗುತ್ತಿದೆ. ಎಕರೆಗೆ ಸರಾಸರಿ 400 ಕಿಲೊ ಇಳುವರಿ ಬರುತ್ತಿದ್ದು, ಭಾರತೀಯ ಎಸ್ಟೇಟ್‌ಗಳಿಂದ ತಂದ ತಳಿಗಳ ಪೈಕಿ ಇದೇ ಅತ್ಯುತ್ತಮವಾಗಿದೆ. ಇದರಲ್ಲಿ ಬಿಆರ್–9, 10 ಮತ್ತು 11 ಎಂಬ 3 ಬಗೆಯವು ಬಳಕೆಯಲ್ಲಿವೆ. (3ನೇ ಪುಟಕ್ಕೆ)

ದಿಢೀರ್ ಕಾಫಿಯ ದಿಢೀರ್ ಲಾಭ!?

ಒಂದು ಟನ್ ಕಾಫಿ ಬೆಳೆಯಲು ಖರ್ಚು ಸುಮಾರು 5 ಸಾವಿರ ರೂಪಾಯಿ. ಇದರಿಂದ ಲಾಭ ಸುಮಾರು ಎರಡೂವರೆ ಸಾವಿರ ರೂಪಾಯಿ. (ರೊಬಸ್ಟಾ ಆದರೆ ಲಾಭ ಸುಮಾರು ಮೂರೂವರೆ ಸಾವಿರ ರೂ. ಎನ್ನಬಹುದು.)

ಇದು ಕಾಫಿ ಬೆಳೆಗಾರನ 'ಅರ್ಥಶಾಸ್ತ್ರ'ವಾದರೆ, ಅತ್ಯಂತ ಕಡಿಮೆ ದರ್ಜೆಯ ಕಾಫಿ ಕೊಂಡು ದಿಢೀರ್ (ಇನ್‌ಸ್ಟೆಂಟ್) ಕಾಫಿಯೆಂದು ತಯಾರಿಸುವ (ಬ್ರೂ, ನೆಸ್‌ಕೆಫೆ ಇತ್ಯಾದಿ) ಉದ್ಯಮಪತಿಗಳ 'ಅರ್ಥಶಾಸ್ತ್ರ' ಹೇಗಿದೆ?

ಅವರು ಕೊಳ್ಳುವ 1 ಟನ್ ಬೀಜದ ಬೆಲೆ, ಕಾಫಿಯ ತಯಾರಿಕೆ, ಪ್ರಚಾರ, ಕಮಿಶನ್ ಎಲ್ಲಾ ಒಟ್ಟು 50 ರಿಂದ 60 ಸಾವಿರ ರೂ. ಖರ್ಚು. ಲಾಭ ಎರಡು ಲಕ್ಷ ಹದಿನೈದು ಸಾವಿರ ರೂಪಾಯಿ!

'ಅರ್ಥಶಾಸ್ತ್ರ'ದ ಈ ತಾರತಮ್ಯವನ್ನು ವಿಚಾರ ಸಂಕಿರಣದಲ್ಲಿ ಬೆಳೆಗಾರರೊಬ್ಬರು ಮಂಡಿಸಿದಾಗ ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಬಹುಪಾಲು ಸಣ್ಣ ಬೆಳೆಗಾರರ ಮೇಲೆ ಅದು ಗಾಢ ಪರಿಣಾಮ ಮಾಡಿದ್ದು ಕಂಡು ಬಂತು.

ಜಯಪುರದ "ಸಹ್ಯಾದ್ರಿ ಕಾಫಿಬೆಳೆಗಾರರ ಸಂಘ"ದ ಸಾಧನೆಗಳ ವರದಿ

ಕಾಫಿ ಬೆಳೆಗಾರರು ಎದುರಿಸುತ್ತಿರುವ ಹಲವು ರೀತಿಯ ತೊಂದರೆಗಳನ್ನು ನಿವಾರಿಸಿ, ಬೆಳೆಗಾರರ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ 18.3.84 ರಂದು ಅಸ್ತಿತ್ವಕ್ಕೆ ಬಂದ, ಶೃಂಗೇರಿ, ಕೊಪ್ಪ, ನ.ರಾ. ಪುರ, ತೀರ್ಥಹಳ್ಳಿ ತಾಲ್ಲೂಕುಗಳ ಕಾರ್ಯವ್ಯಾಪ್ತಿ ಹೊಂದಿರುವ ನಮ್ಮ ಸಂಘದ ಈವರೆಗಿನ ಕೆಲವು ಪ್ರಮುಖ ಸಾಧನೆಗಳು ಇಲ್ಲಿವೆ.

ಸಂಘಕ್ಕೆ ಹಾಲಿ 800 ಜನ ಸದಸ್ಯರಾಗಿದ್ದು, ನ. ರಾ. ಪುರ ತಾ|| ಬೆಳೆಗಾರರ ಸಂಘವು ವಿಲೀನಗೊಂಡಿರುವುದರಿಂದ ಸಂಘವು ವರ್ಷಾಂತ್ಯದೊಳಗೆ 1400 ಜನ ಸದಸ್ಯರುಗಳುಳ್ಳ, ರಾಜ್ಯದ ಅತಿದೊಡ್ಡ ಬೆಳೆಗಾರರ ಸಂಘವಾಗಲಿರುವುದನ್ನು ತಿಳಿಸಲು ಸಂತೋಷಿಸುತ್ತೇವೆ.

1 ಕೊಪ್ಪದಲ್ಲಿ ಕಾಫಿ ಮಂಡಳಿಯ ಕಿರಿಯ ಸಂಪರ್ಕಾಧಿಕಾರಿಗಳ ಹುದ್ದೆಯನ್ನು ಹಿರಿಯ ಸಂಪರ್ಕಾಧಿಕಾರಿಯಾಗಿ ಬಡ್ತಿಗೊಳಿಸಬೇಕೆಂದೂ, ಜಯಪುರಕ್ಕೆ ಒಬ್ಬ ಕಿರಿಯ ಸಂಪರ್ಕಾಧಿಕಾರಿಯನ್ನು ನೇಮಿಸಬೇಕೆಂದೂ ಸಂಘ ಕೇಳಿದ್ದು, ಈಗ ಕೊಪ್ಪಕ್ಕೆ ಹಿ|| ಸಂ|| ಹುದ್ದೆ ಮಂಜೂರಾಗಿದೆ.

2. ಏಲಕ್ಕಿ ಮಂಡಳಿಯಿಂದ ರೈತರಿಗೆ ಏಲಕ್ಕಿ ಸಸಿಗಳನ್ನು ರಿಯಾಯ್ತಿ ದರದಲ್ಲಿ ಒದಗಿಸುವಂತೆ ಮಾಡಲಾಗಿದೆ.

3 ಬಾಕಿ ಇರುವ ಏಲಕ್ಕಿ ಸಿ.ಆರ್.ಸಿ. ಮತ್ತು ಕಾಫಿ ಸಿ.ಆರ್.ಸಿ. ಕಡತಗಳನ್ನು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ನೀರೆತ್ತುವ ಅನುಮತಿ ಪತ್ರಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡುವಂತೆ ಸಂಬಂಧಪಟ್ಟವರಲ್ಲಿಗೆ ನಿಯೋಗ ಹೋಗಿ ವ್ಯವಸ್ಥೆ ಮಾಡಿದೆ.

4. ಹಾಲಿ ಒಂದು ಹೆಕ್ಟೇರ್ ಕಾಫಿ ಜಮೀನು ಉಳ್ಳವರಿಗೂ ಒಂದು ಸಾವಿರ ಹೆಕ್ಟೇರ್ ಉಳ್ಳವರಿಗೂ ಸರ್ಕಾರವು ಒಂದೇ ರೀತಿ 250 ರೂ. ವೃತ್ತಿ ತೆರಿಗೆ ವಿಧಿಸಿರುವುದನ್ನು ಖಂಡಿಸಿ, ವೃತ್ತಿ ತೆರಿಗೆ ಮನ್ನಾ ಮಾಡುವಂತೆ ಸಂಘ ಸರ್ಕಾರವನ್ನು ಒತ್ತಾಯಿಸಿದೆ.

5. ಕಾಫಿಗೆ 1982-83 ರಲ್ಲಿ ಶೇ. 4ರ ಖರೀದಿ ತೆರಿಗೆ ವಿಧಿಸಿ ಅದನ್ನು 75–76 ರಿಂದ ವಸೂಲಿ ಮಾಡುವ ಸರ್ಕಾರದ ಕ್ರಮವನ್ನು ಸಂಘವು ಖಂಡಿಸಿ, ಅದನ್ನು ಮನ್ನಾ ಮಾಡುವಂತೆ ಒತ್ತಾಯಿಸಿದೆ.

ಈ ಬಾಬ್ತು ಕಾಫಿ ಮಂಡಳಿಯು ಬೆಳೆಗಾರನಿಗೆ ಸಲ್ಲುವ ಹಣದಲ್ಲಿ ಪಾಯಿಂಟಿಗೆ 69 ಪೈಸೆ ಹಿಡಿದು ಕೊಂಡಿದ್ದ ಬಗ್ಗೆ ಸಂಘವು ಇತರ ಸಂಘಗಳೊಂದಿಗೆ ಮಂಡಳಿಯ ಜೊತೆ ವ್ಯವಹರಿಸಿ ಪಾಯಿಂಟಿಗೆ 45 ಪೈಸೆಯಷ್ಟು ಬಿಡುಗಡೆ ಮಾಡಿಸಲಾಗಿದೆ.

6. ರಫ್ತು ತೆರಿಗೆ ಪ್ರತಿ ಟನ್ನಿಗೆ 1980 ರವರೆಗೆ 5300 ರೂ. ಇದ್ದು, 80 ರಲ್ಲಿ 6400 ರೂ. ಗೆ, 84 ರಲ್ಲಿ 7200 ರೂ.ಗೆ ಏರಿಸಿರುವುದನ್ನು ಸಂಘ ಖಂಡಿಸಿದೆ.

ಹೀಗೆ, ಕಾಫಿ ಬೆಳೆಗಾರರಿಗೆ ತೆರಿಗೆಯ ಹೊರೆ ಅತ್ಯಧಿಕವಾಗಿರುವುದು ಮತ್ತು ಬೆಲೆ ಇಳಿಮುಖವಾಗಿರುವುದು—ಈ ಬಗ್ಗೆ ಬೆಳೆಗಾರರ ನಿಜಸ್ಥಿತಿ ತಿಳಿಯಲು ಕೇಂದ್ರ ಸರ್ಕಾರ ರಚಿಸಿರುವ ಆಯೋಗವು ಸದ್ಯದಲ್ಲೇ ಕರ್ನಾಟಕಕ್ಕೆ ಬರಲಿದೆ.

7. ರಾಜ್ಯ ಕೃಷಿ ಮತ್ತು ಗ್ರಾ. ಅ. ಬ್ಯಾಂಕ್‌ಗಳಲ್ಲಿ ರೈತರು ಟ್ರಾಕ್ಟರ್, ಟಿಲ್ಲರ್, ಪಂಪ್‌ಸೆಟ್ ಮತ್ತಿತರ ಯಂತ್ರೋಪಕರಣಗಳಿಗೆ ಸಾಲ ಪಡೆದಾಗ ಅವರ ಜಮೀನನ್ನೂ ಆಧಾರ ಮಾಡಿಕೊಳ್ಳುತ್ತಿರುವ ಪದ್ಧತಿ ಕೈಬಿಟ್ಟು, ಬೇರೆ ವಾಣಿಜ್ಯ ಬ್ಯಾಂಕುಗಳಂತೆ ಸದರಿ ಯಂತ್ರೋಪಕರಣಗಳನ್ನು ಮಾತ್ರ ಆಧಾರ ಮಾಡಿಕೊಳ್ಳಬೇಕೆಂಬ ಸಂಘದ ಕೋರಿಕೆ ಕಾರ್ಯಗತವಾಗಲಿದೆಯೆಂದು ಗೊತ್ತಾಗಿದೆ.

8. ಕಾಫಿ ಬೆಳೆಗಾರನಿಗೂ ಕಾಫಿ ಮಂಡಳಿಗೂ ನಡುವಿನ ಸಂಪರ್ಕದ ಅಂತರವನ್ನು ತೊಡೆಯುವ ದಿಕ್ಕಿನಲ್ಲಿ, ಕಾಫಿ ಮಂಡಳಿಯ ಸದಸ್ಯರು ಬೆಳೆಗಾರರ ಸಮಸ್ಯೆಗಳ ಬಗ್ಗೆ ಬೆಳೆಗಾರರ ಸಂಘದೊಂದಿಗೆ ಮೊದಲು ಚರ್ಚಿಸಿ, ನಂತರ ಕಾಫಿ ಮಂಡಳಿಯ ಸಭೆಯಲ್ಲಿ ಚರ್ಚಿಸಲು ಒಪ್ಪಿದ್ದಾರೆ.

9. ಈ ಸಂಘದ ಗಮನಕ್ಕೆ ತಂದ ಮಾಲೀಕರ ಮತ್ತು ಕಾರ್ಮಿಕರ ನಡುವಿನ ಹಲವು ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ಸಂಘವು ಯಶಸ್ವಿಯಾಗಿದೆ.

10. ಸಂಘದ ಕಾರ್ಯ ಚಟುವಟಿಕೆಗಳು ಎಲ್ಲ ಸದಸ್ಯರಿಗೂ ತಿಳಿಯಲು 3 ತಿಂಗಳಿಗೊಮ್ಮೆ ಪ್ರಚಾರ ಪತ್ರಿಕೆ (ನ್ಯೂಸ್ ಲೆಟರ್) ಪ್ರಕಟಿಸಲಾಗುತ್ತಿದೆ.

ಈ ಸಾಧನೆಗಳಲ್ಲದೆ ಸಂಘವು ಬೆಳೆಗಾರರ ಹಲವು ಬಗೆಯ ಸಮಸ್ಯೆಗಳ ನಿವಾರಣೆ ಬಗ್ಗೆ ಸಂಬಂಧ ಪಟ್ಟವರಲ್ಲಿ ಸೂಕ್ತ ರೀತಿಯಲ್ಲಿ ಸತತವಾಗಿ ವ್ಯವಹರಿಸುತ್ತಿದೆ.

—ಕೌಳಿ ಶ್ರೀನಿವಾಸ್,
ಗೌ|| ಕಾರ್ಯದರ್ಶಿ, ಸಹ್ಯಾದ್ರಿ ಕಾಫಿ ಬೆಳೆಗಾರರ ಸಂಘ, ಜಯಪುರ.

ಚುನಾವಣೆ ಮುನ್ನೋಟ: ಜನತಾಕ್ಕೆ ಮೇಲುಗೈ?

(ಮೊದಲ ಪುಟದಿಂದ)

ಹಿಂದಿನ ಎರಡು ಚುನಾವಣೆಗಳಲ್ಲೂ ತನ್ನ ಅಭ್ಯರ್ಥಿಯನ್ನು ನಿಲ್ಲಿಸದೆ, ಹಿಂದೆ ಜನಸಂಘ ಇದ್ದಾಗ ಇದ್ದಂಥ ಪಕ್ಷದ ಗ್ರಾಮೀಣ ಘಟಕಗಳು ಇವತ್ತು ಲುಪ್ತನಾಗಿದ್ದು, ಪಕ್ಷವನ್ನು ಕ್ಷೇತ್ರದೊಳಗೆ ಪುನಃ ವ್ಯಾಪಕವಾಗಿ ಬೆಳೆಸುವುದೇ ಸ್ಪರ್ಧೆಯ ಮುಖ್ಯ ಉದ್ದೇಶವಾಗಿರಬಹುದು.

ಪ್ರಜ್ಞಾವಂತರು ಬೆಂಬಲಿಸಿಯಾರೆ?

ಇದಕ್ಕಿಂತ ಹೆಚ್ಚಿಗೆ—ಅಂದರೆ ಮುದ್ದಾಂ ಗೆಲ್ಲುವುದಾಗಲೀ, ತನಗೆ 50 ಸ್ಥಾನ ಬಿಟ್ಟು ಕೊಡದ ಜನತಾ ಪಕ್ಷದ ಮತಗಳನ್ನು ಕಸಿದು ಆದರ ಅಭ್ಯರ್ಥಿಯನ್ನು ಸೋಲಿಸುವುದಾಗಲಿ—ಬಿಜೆಪಿಯ ಗುರಿಯಾಗಿದ್ದರೆ, ಅದು ಸಾಧ್ಯವಾಗುವುದು ಬಹುಶಃ ಕನಸಿನ ಮಾತೇ ಸರಿಯೇನೋ. ಏಕೆಂದರೆ, ತನ್ನದೇ ಬಲದಿಂದ ಗೆಲ್ಲಲು ಸಾಧ್ಯವಿಲ್ಲದ ಕಡೆ ಅನಗತ್ಯವಾಗಿ ಅಭ್ಯರ್ಥಿಯನ್ನು ನಿಲ್ಲಿಸುವುದನ್ನೇ ವಿರೋಧಿಸುವ ಒಂದು ಗುಂಪು ಪಕ್ಷದ ಕಡು ಬೆಂಬಲಿಗರಲ್ಲೇ ಇರುವಾಗ, ಹೀಗೆ ಆ ಪಕ್ಷದಿಂದ ಈ ಪಕ್ಷಕ್ಕೆ ಕರೆತಂದು ಅಭ್ಯರ್ಥಿಯಾಗಿ ಮಾಡಿದರೆ, ಬಹುಪಾಲು ಪ್ರಜ್ಞಾವಂತರೇ ಇರುವ ಬಿಜೆಪಿಯ ಮತದಾರರು ಅದನ್ನು ಬೆಂಬಲಿಸಿಯಾರೆ?

ಇದರ ಮೇಲೆ ಶ್ರೀಕಂಠ ಗೌಡ ಸ್ವಂತವಾಗಿ ಗಳಿಸಿದರೆ ಬಹುಪಾಲು ಕಾಂಗೈ ಮತಗಳನ್ನೇ ಗಳಿಸುವ ಸಾಧ್ಯತೆ ಹೆಚ್ಚು (ಇದು ಕಾಂಗೈನವರದೇ ಹೇಳಿಕೆ.) ಬಿಜೆಪಿಯ ಸ್ವಂತ ಮತಗಳಲ್ಲಿ ಬಿಜೆಪಿ ಅಭ್ಯರ್ಥಿ ಇಲ್ಲದಿದ್ದಾಗ ಅರ್ಧಕ್ಕರ್ಧ ಹಂಚಿಕೆಯಾಗುತ್ತಿತ್ತೇ ಹೊರತು ಪೂರ್ತಿಯೇನೂ ಜನತಾ ಪಕ್ಷಕ್ಕೆ ಬೀಳುತ್ತಿರಲಿಲ್ಲ. ಹೀಗಾಗಿ ಇವರ ಸ್ಪರ್ಧೆ ಜನತಾ ಪಕ್ಷಕ್ಕೆ ದೊಡ್ಡ ನಷ್ಟವನ್ನೇನೂ ಉಂಟು ಮಾಡುವ ಸಂಭವ ಕಡಿಮೆ.

(ಇನ್ನುಳಿದ ಮೂವರು ಪಕ್ಷೇತರ ಅಭ್ಯರ್ಥಿಗಳ ಸ್ಪರ್ಧೆ ಚುನಾವಣಾ ವ್ಯವಸ್ಥೆಯ ಒಂದು ಹೀನ ವಿಡಂಬನೆ ಹಾಗೂ ಸರ್ಕಾರದ ಬೊಕ್ಕಸದ ಮತಿಹೀನ ಪೋಲು ಹೊರತು ಬೇರೇನಲ್ಲ ಎನ್ನದೆ ವಿಧಿಯಿಲ್ಲ.)

ಜನತಾಕ್ಕೆ ಮೇಲುಗೈ

ಕಾಂಗೈ ಮತ್ತು ಜನತಾ ಪಕ್ಷಗಳೆರಡಕ್ಕೂ ಈ ಕ್ಷೇತ್ರದ ಮೂರೂ ತಾಲ್ಲೂಕುಗಳಲ್ಲಿ ಪ್ರಬಲ ಮತ್ತು ದುರ್ಬಲ ಪ್ರದೇಶಗಳಿವೆ. ಆದರೆ ಕಾಂಗೈಗೆ ಇರುವ ತೊಡಕುಗಳು, ಜನತಾಕ್ಕೆ ಕೆಲವರು ಗೋವಿಂದಗೌಡರ ಬಗೆಗಿನ ತೃಪ್ತಿಯಿಂದಾದರೆ ಇನ್ನು ಕೆಲವರು ಜನತಾ ಸರ್ಕಾರದ ಬಗೆಗಿನ ತೃಪ್ತಿಯಿಂದ ಬೆಂಬಲಿಸುವ ಸಾಧ್ಯತೆ—ಇವುಗಳನ್ನೆಲ್ಲ ತುಲನೆ ಮಾಡಿದರೆ ಹಾಗೂ ಹಳ್ಳಿಗಳಲ್ಲಿನ ಬಡ ವರ್ಗಗಳವರೂ ಜನತಾದ ಪ್ರಚಾರಕ್ಕೆ ಸ್ಪಂದಿಸಿಕೊಂಡಿರುವುದು ಗಮನಿಸಿದರೆ, **ಮೇಲುಗೈ ಖಂಡಿತ ಜನತಾ ಪರ ವಾಲಿರುವಂತಿದೆ.**

ಇಷ್ಟರ ಮೇಲೆ ಇನ್ನು ಎಲ್ಲಾ ಲೆಕ್ಕಾಚಾರಗಳನ್ನೂ ಮೀರಿ ಮತಗಳು ಚಲಾವಣೆಯಾದರೆ ಮಾತ್ರ ಕಾಂಗೈ ಗೆಲ್ಲಬಹುದು ಆದರೆ ಈ ಸಾಧ್ಯತೆ ಈಗಿನ ವಿದ್ಯಮಾನಗಳನ್ನು ಗಮನಿಸಿದರೆ ಅಷ್ಟಾಗಿ ಇಲ್ಲ. ಯಾರು ಗೆದ್ದರೂ ಅಂತರ ಬಹಳ ಕಮ್ಮಿ ಇರುತ್ತದೆಂಬುದು ಮಾತ್ರ ನಿಸ್ಸಂದೇಹ.

—ಸಿರಿಮನೆ ನಾಗರಾಜ್.

(ಸಮೀಕ್ಷೆ: 27-2-1985)

ಕಾಫಿ ಬೆಳೆ ವಿಚಾರ ಸಂಕಿರಣ

(2ನೇ ಪುಟದಿಂದ)

ಕಾಂಗೋ ದೇಶದಿಂದ ಬೀಜ ತಂದು ರೊಬಸ್ಟಾ ಜೊತೆ ಮಿಶ್ರತಳಿ ಮಾಡಿದ ಸಿ. ಇಂಟು.ಆರ್. ಎಂಬ ತಳಿ ಸಹ ಬಹಳ ಉತ್ತಮವಾಗಿ ಬರುತ್ತಿದೆ.

ಬೆಳೆಗಾರರು ತಮ್ಮ ತೋಟಗಳಲ್ಲಿ 2-3 ತಳಿಯ ಗಿಡಗಳನ್ನು ಬೆಳೆಸಬೇಕು. ಆಕಸ್ಮಾತ್ ಒಮ್ಮೆ ಒಂದು ತಳಿಯ ಇಳುವರಿ ಕುಸಿದರೂ ಪೂರ್ತಿ ನಷ್ಟ ತಪ್ಪುತ್ತದೆ ಎಂದು ಜೆಮ್ಷೆಡ್ ಅಹಮದ್ ಸೂಚಿಸಿದರು.

ಫಲವತ್ತತೆಯ ಸಮತೋಲನ

ತೋಟಗಳಲ್ಲಿ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಸಿ. ಎಸ್. ಕೃಷ್ಣಪ್ಪ ನಾಯಕ್ ವಿವರಿಸುತ್ತಾ ನಿರಂತರವಾಗಿ ಬೆಳೆ ತೆಗೆಯುವುದರಿಂದ ಮಣ್ಣಿನಲ್ಲಿ ಕೊರತೆಯಾಗುವ ಮತ್ತು ಗಿಡಗಳಿಗೆ ಬೇಕಾಗುವ ಪೌಷ್ಟಿಕಾಂಶಗಳನ್ನು ಭರ್ತಿ ಮಾಡಲು ಗೊಬ್ಬರ ಕೊಡುತ್ತೇವೆ. ಮಣ್ಣಿನಲ್ಲಿ ಗಿಡಗಳಿಗೆ ದೊರೆಯಬೇಕಾದ ಮುಖ್ಯ ಪೌಷ್ಟಿಕಾಂಶಗಳ ಪ್ರಮಾಣವನ್ನು ತಿಳಿಯಲು 2-3 ವರ್ಷಕ್ಕೆ ಒಮ್ಮೆಯಾದರೂ ಮಣ್ಣು ಪರೀಕ್ಷೆ ಮಾಡಿಸುವುದು ಅಗತ್ಯ. ಇಲ್ಲವಾದರೆ ಗೊಬ್ಬರ ಪೋಲಾಗಬಹುದು. ಮಣ್ಣಿನ ಸಾರದಲ್ಲಿ ಅಸಮತೋಲನವಾಗಬಹುದು ಎಂದರು.

ಸಸ್ಯಗಳ ಬೆಳವಣಿಗೆಗೆ 16 ಬಗೆಯ ಪೌಷ್ಟಿಕಾಂಶಗಳ ಅವಶ್ಯಕತೆಯಿದ್ದು ಅದರಲ್ಲಿ ಸಾರಜನಕ (ಎನ್), ರಂಜಕ (ಪಿ) ಮತ್ತು ಪೊಟ್ಯಾಸಿಯಂ (ಕೆ) ಇವು ಅತಿ ಹೆಚ್ಚು ಪ್ರಮಾಣದಲ್ಲಿ ಬೇಕಾಗುತ್ತವೆ. ಸತು, ಮ್ಯಾಂಗನೀಸ್, ಬೋರಾನ್ ಮುಂತಾದುವು ಸಣ್ಣ ಪ್ರಮಾಣದಲ್ಲಿ ಬೇಕಾಗುತ್ತವೆ. ಇವುಗಳು ಮಣ್ಣಿನಿಂದ ಗಿಡಗಳಿಗೆ ದೊರೆಯುವ ನಿರ್ದಿಷ್ಟ ಪ್ರಮಾಣವನ್ನು ಕಂಡು ಹಿಡಿಯಲು ಮಣ್ಣು ಪರೀಕ್ಷೆ ಮಾಡಿಸುವುದು ಅಗತ್ಯವೆಂದು ಹೇಳಿದರು.

ಆಮ್ಲೀಯತೆ

ಗಿಡಗಳಿಗೆ ಬೇಕಾಗುವ ಪೌಷ್ಟಿಕಾಂಶಗಳು ಮಣ್ಣಿನಿಂದ ದೊರೆಯಬೇಕಾದರೆ ಮಣ್ಣಿನ ಪಿ. ಹೆಚ್. (ಆಮ್ಲೀಯತೆ) 6.0 ಯಿಂದ 6.5 ಇರಬೇಕು. ಸತತವಾಗಿ ರಾಸಾಯನಿಕ ಗೊಬ್ಬರಗಳನ್ನು ಬಳಸುವುದರಿಂದ ಮಣ್ಣಿನ ಆಮ್ಲೀಯತೆ ಹೆಚ್ಚಾಗುತ್ತದೆ. ಮತ್ತು ಮಣ್ಣಿನಲ್ಲಿರುವ ಕ್ಯಾಲ್ಸಿಯಂ ಮತ್ತು ಮೆಗ್ನೀಶಿಯಂಗಳು ಮಳೆಯ ನೀರಿನಿಂದ ಕೊಚ್ಚಿಕೊಂಡು ಹೋಗುವುದರಿಂದ ಮಣ್ಣಿನ ಆಮ್ಲೀಯತೆ ಹೆಚ್ಚಾಗಬಹುದು.

ಮಣ್ಣಿನಲ್ಲಿ ಆಮ್ಲೀಯತೆ ಹೆಚ್ಚಾದಾಗ ಗಿಡಗಳಿಗೆ ಬೇಕಾಗುವ ಪೌಷ್ಟಿಕಾಂಶಗಳು ಮಣ್ಣಿನಿಂದ ದೊರೆಯುವುದಿಲ್ಲ. ಗಿಡಗಳಿಗೆ ನಂಜು ಉಂಟು ಮಾಡುವ ಅಲ್ಯೂಮಿನಿಯಂ, ಮ್ಯಾಂಗನೀಸ್‌ಗಳ ಪ್ರಮಾಣ ಹೆಚ್ಚಾಗಿ ಗಿಡಗಳಿಗೆ ಹಾನಿಯುಂಟಾಗಬಹುದು. ಮಣ್ಣಿನ ಆಮ್ಲೀಯತೆಯನ್ನು ನಿಗದಿ ಪ್ರಮಾಣಕ್ಕೆ ತರಲು ಮಣ್ಣು ಪರೀಕ್ಷಿಸಿ ಅಗತ್ಯ ಪ್ರಮಾಣದ ಸುಣ್ಣವನ್ನು ಹಾಕಬೇಕು ಆಮ್ಲೀಯತೆಯನ್ನು ಕಡಿಮೆ ಮಾಡಲು ಮಣ್ಣಿಗೆ ಕ್ಯಾಲ್ಸಿಯಂ ಕಾರ್ಬೋನೇಟ್ ಅಥವಾ ಡೋಲಮೈಟ್ ಸುಣ್ಣವನ್ನು ಹಾಕಬೇಕು.

ಈ ತರಹದ ಪರೀಕ್ಷೆಗಾಗಿ 1980 ರಲ್ಲಿ ಸಂಚಾರಿ ಮಣ್ಣು ಪರೀಕ್ಷಾ ಘಟಕವನ್ನು ಕಾಫಿ ಮಂಡಳಿಯು ಗ್ರಾಹಕರಿಗೋಸ್ಕರ ಆರಂಭಿಸಿದೆ ಎಂದು ತಿಳಿಸಿದರು.

ಗೊಬ್ಬರಗಳು

ಗಿಡಗಳಿಗೆ ಸಾರಜನಕವನ್ನು ಕೊಡತಕ್ಕ ಗೊಬ್ಬರಗಳಾದ ಯೂರಿಯ, ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ ಮತ್ತು ಅಮೋನಿಯಂ ಸಲ್ಫೇಟ್‌ಗಳನ್ನು ಉಪಯೋಗಿಸಬಹುದು. ಅಮೋನಿಯಂ ಸಲ್ಫೇಟ್ ಒಂದನ್ನೇ ಸತತವಾಗಿ ಉಪಯೋಗಿಸುವುದರಿಂದ ಉಪಯುಕ್ತ ಗಂಧಕದ ಅಂಶವು ಕೊಡುವುದಲ್ಲದೇ ಮಣ್ಣಿನ ಆಮ್ಲತೆಯನ್ನು ಹೆಚ್ಚಿಸುವುದು. ಆದ್ದರಿಂದ ವರ್ಷಕೊಮ್ಮೆ ಮೇಲೆ ಹೇಳಿರುವ ಗೊಬ್ಬರಗಳನ್ನು ಬದಲಾಯಿಸಿ ಉಪಯೋಗಿಸುವುದರಿಂದ ಆಮ್ಲತೆಯ ಮಟ್ಟವನ್ನು ತಗ್ಗಿಸಬಹುದು.

ನೀರಿನಲ್ಲಿ ಕರಗುವ ರಂಜಕ ಉಳ್ಳ ಗೊಬ್ಬರಗಳನ್ನು ಅಧಿಕ ಆಮ್ಲೀಯತೆ ಇರುವ ಮಣ್ಣಿಗೆ ಹಾಕಿದಾಗ ರಂಜಕವು ಮಣ್ಣಿನಲ್ಲಿರುವ ಕಬ್ಬಿಣ ಮತ್ತು ಅಲ್ಯೂಮಿನಿಯಂ ಜೊತೆ ಸಂಪರ್ಕ ಹೊಂದಿ ಗಿಡಗಳಿಗೆ ಇದು ದೊರೆಯದಂತಾಗುತ್ತದೆ ಎಂದ ಶ್ರೀ ನಾಯಕ್ ಮಣ್ಣಿನ ಆಮ್ಲೀಯತೆಯ ಮಟ್ಟಕ್ಕನುಸಾರವಾಗಿ ಯಾವ ಯಾವ ಗೊಬ್ಬರ ಉಪಯೋಗಿಸಬೇಕೆಂಬುದನ್ನು ವಿವರಿಸಿದರು.

ರಾಸಾಯನಿಕ ಗೊಬ್ಬರಗಳು ಪರಿಣಾಮಕಾರಿಯಾಗಬೇಕಾದರೆ ಅವು ಸಮತೋಲನವಾಗಿರಬೇಕು, ಸಾಕಷ್ಟು ಪ್ರಮಾಣದಲ್ಲಿ ಸಕಾಲಕ್ಕೆ ಹಾಕಬೇಕು. ಮತ್ತು ಕಾಫಿ ಗಿಡಗಳ ಬೇರುಗಳಿಗೆ ದೊರೆಯುವಂತೆ ಹಾಕಬೇಕು ಎಂದೂ ಅವರು ವಿವರಿಸಿದರು.

ಬಾಳೆಹೊನ್ನೂರು ಪೋಲೀಸ್ ಠಾಣೆ ಆರಂಭ

ಬಾಳೆಹೊನ್ನೂರು: ಈ ವರೆಗೆ ಪೋಲೀಸ್ ಉಪಠಾಣೆ ಹೊಂದಿದ್ದ ಈ ಊರಿಗೆ ಒಬ್ಬ ಸಬ್ ಇನ್‌ಸ್ಪೆಕ್ಟರ್, ಒಬ್ಬ ಸಹಾಯಕ ಸ॥ ಇ॥, ನಾಲ್ವರು ಮುಖ್ಯ ಪೇದೆಗಳು ಮತ್ತು 24 ಪೇದೆಗಳ ಮಂಜೂರಾತಿ ಪಡೆದ ಪೂರ್ಣ ಪ್ರಮಾಣದ ಪೋಲೀಸ್ ಠಾಣೆಯನ್ನು ಈಚೆಗೆ ಆರಂಭಿಸಲಾಯಿತು.

ಈ ಸಂದರ್ಭದಲ್ಲಿ ಹಾಜರಿದ್ದ ರಾಷ್ಟ್ರಪ್ರಶಸ್ತಿ ವಿಜೇತ ತರೀಕೆರೆ ಡಿವೈಎಸ್ಪಿ ರಂಗ ಡೊರೈ ಅವರನ್ನು ರಸ್ತೆ ಬಳಕೆದಾರರ ವೇದಿಕೆ ಪರವಾಗಿ ಹಾರಾರ್ಪಣೆ ಮಾಡಿ ಗೌರವಿಸಲಾಯಿತು. ಸಮಯಕ್ಕೆ ಸರಿಯಾಗಿ ಓಡಾಡದ ಬಸ್ಸುಗಳ ಲೈಸೆನ್ಸ್ ರದ್ದು ಪಡಿಸಿ ಬೇರೆಯವರಿಗೆ ಲೈಸೆನ್ಸ್ ನೀಡುವಂತೆ ಎಸ್ಪಿಯವರಿಗೆ ಮನವಿ ಸಲ್ಲಿಸಲಾಯಿತು.

ಕುಟುಂಬ ಯೋಜನೆ ಪ್ರಚಾರ ಭಾಷಣ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಭಾರತೀಯ ಕುಟುಂಬ ಯೋಜನಾ ಸಂಸ್ಥೆಯ ಶಿವಮೊಗ್ಗ ಘಟಕ—ಇವುಗಳ ಆಶ್ರಯದಲ್ಲಿ ಫೆ. 20 ರಂದು ಇಲ್ಲಿ ಡಾ॥ ಲಕ್ಷ್ಮೀನಾರಾಯಣ ಕಾಶಿಯವರಿಂದ "ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಪರಿಣಾಮಗಳು" ಎಂಬ ವಿಷಯವಾಗಿ ಭಾಷಣ ಮತ್ತು ಅನಂತರ ಚಲನಚಿತ್ರ ಪ್ರದರ್ಶನ ನಡೆದವು.

ಕೊಪ್ಪದಲ್ಲಿ ಕೈಗಾರಿಕೆ ವಿಚಾರ ಸಂಕಿರಣ

ಕೊಪ್ಪ: ಜಿಲ್ಲಾ ಕೈಗಾರಿಕಾ ಕೇಂದ್ರ ಉಪವಿಭಾಗ ಮತ್ತು ಇಲ್ಲಿನ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಕೈಗಾರಿಕಾ ವಿಚಾರ ಸಂಕಿರಣವೊಂದು ಇಲ್ಲಿ ಫೆ. 20 ರಂದು ನಡೆಯಿತು. ಲಯನ್ಸ್ ಅಧ್ಯಕ್ಷ ಡಾ॥ ಮೋಹನ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು ಮುಖ್ಯ ಅತಿಥಿಗಳಾಗಿದ್ದ ಪಿ.ಜಿ.ಗುರ್ಜರ್ ಅವರು ಈ ಪ್ರದೇಶದಲ್ಲಿ ಸಣ್ಣ ಕೈಗಾರಿಕಾ ಘಟಕಗಳು ಕೈಗೊಳ್ಳಬಹುದಾದ ಕೆಲವು ಚಟುವಟಿಕೆಗಳನ್ನು ಕುರಿತು ಚರ್ಚಿಸಿದರು.

ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ಮಂಗಳೂರು ಮತ್ತು ಬೆಂಗಳೂರು ಘಟಕಗಳ ಮೂಲಕ ಸಣ್ಣ ಉದ್ದಿಮೆದಾರರಿಗೆ ದೊರಕುವ ತರಬೇತಿ ಮತ್ತು ಮಾರ್ಗದರ್ಶನಗಳ ಬಗ್ಗೆ ವರ್ಗೀಸ್, ವಿವಿಧ ಸಾಲ ಸೌಲಭ್ಯಗಳ ಬಗ್ಗೆ ಶ್ರೀಧರ್ ವಿವರಣೆ ನೀಡಿದರು. ಕೆ.ಎ.ಜಯನಂದ ಸ್ವಾಗತಿಸಿ, ಎಸ್.ರಿಯಾಜ್ ಅಹಮದ್ ವಂದಿಸಿದರು.

ಇದೇ ಸಂದರ್ಭದಲ್ಲಿ ಕೆಲವು ಮಂದಿ ಕುಶಲ ಕರ್ಮಿಗಳಿಗೆ ಉಪಕರಣಗಳ ಕಿಟ್‌ಗಳನ್ನು ಹಂಚಲಾಯತು.

ಕೊಪ್ಪ ಪ್ರೌಢ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ

ಕೊಪ್ಪ: ಇಲ್ಲಿನ ಸರ್ಕಾರಿ ಪ್ರೌಢ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ ಈಚೆಗೆ ಆರಂಭವಾಗಿದ್ದು, ಪ್ರೌಢ ಶಾಲೆ ಮತ್ತು ಕಿರಿಯ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಯ ಉದ್ದೇಶವನ್ನು ಹೊಂದಿರುವುದಾಗಿ ಅದು ಹೇಳಿ ಕೊಂಡಿದೆ. ಸಂಘದ ತಾತ್ಕಾಲಿಕ ಸಮಿತಿಗೆ ಕೆ.ಎನ್. ಶಿವಾನಂದ (ಅಧ್ಯಕ್ಷರು), ಜಾನ್/ಪೆರಿಸ್ (ಕಾರ್ಯದರ್ಶಿ), ಚಾಂದ್ ಮಾಲ್ (ಖಜಾಂಚಿ)ಹಾಗೂ 8 ಜನ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಶೃಂಗೇರಿ ಭೂ ಬ್ಯಾಂಕ್‌ನಿಂದ 2 ಲಕ್ಷ ರೂ. ಸಾಲ ನೀಡಿಕೆ

ಶೃಂಗೇರಿ: ಇಲ್ಲಿನ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಭೂ ಅಭಿವೃದ್ಧಿ ಬ್ಯಾಂಕ್) ಫೆ. 18 ರಂದು ಒಂದೇ ಬಾರಿಗೆ 2 ಲಕ್ಷ ರೂ. ಸಾಲವನ್ನು ವಿತರಣೆ ಮಾಡಿದೆ. ಇದರಿಂದ 1984–85ನೇ ಸಾಲಿನಲ್ಲಿ ಈವರೆಗೆ ಒಟ್ಟು 15 ಲಕ್ಷ ರೂ. ಸಾಲ ವಿತರಣೆ ಮಾಡಿದಂತಾಗಿದೆ.

ಕೊಪ್ಪದಲ್ಲಿ ಹೆಚ್ಚುತ್ತಿರುವ ಕಳ್ಳರ ಹಾವಳಿ

ಕೊಪ್ಪ: ಇಲ್ಲಿ ಈಚಿನ ವಾರಗಳಲ್ಲಿ ಕಳ್ಳರ ಹಾವಳಿ ತೀವ್ರವಾಗಿ ಹೆಚ್ಚುತ್ತಿರುವುದು ವರದಿಯಾಗುತ್ತಿದೆ.

ಕಳೆದ ವಾರ ಸುಭಾಷ್ ರಸ್ತೆಯ ಮನೆಯೊಂದರಲ್ಲಿ ರಾತ್ರಿ ಮನೆಯವರು ಮಲಗಿದ್ದಂತೆಯೇ ಕಳ್ಳರು ನುಗ್ಗಿ ಸುಮಾರು 10 ಸಾವಿರ ರೂ. ಬೆಲೆಯ ಒಡವೆಗಳನ್ನು ಕದ್ದಿದ್ದಾರೆಂದು ದೂರು ನೀಡಲಾಗಿದೆ. ಪೋಲೀಸ್ ನಾಯಿಗಳನ್ನು ಕರೆಸಲಾಯಿತಾದರೂ ಯಾವುದೇ ಸುಳಿವು ಸಿಕ್ಕಿಲ್ಲವೆನ್ನಲಾಗಿದೆ

ಕಳೆದ ತಿಂಗಳು ಇದೇ ರಸ್ತೆಯ ಇನ್ನೊಂದು ಮನೆಯಲ್ಲಿ ಇಂಥದೇ ಕಳವಿನ ಯತ್ನ ನಡೆದಿದ್ದು ಕಳ್ಳರಿಗೆ ಹೆಚ್ಚೇನೂ ಸಿಕ್ಕಿರಲಿಲ್ಲವೆನ್ನಲಾಗಿದೆ.

ಇದಲ್ಲದೆ ಚಿಕ್ಕಮಗಳೂರು ರಸ್ತೆಯ ಎರಡು–ಮೂರು ಮನೆಗಳಲ್ಲಿ ಕಳ್ಳತನದ ವಿಫಲ ಪ್ರಯತ್ನ ನಡೆಸಿ, ಮನೆಯವರಿಗೆ ಎಚ್ಚರವಾದಾಗ ಪರಾರಿಯಾಗಿದ್ದಾಗಿಯೂ ಗೊತ್ತಾಗಿದೆ.

ಹೀಗೆ ಹೆಚ್ಚುತ್ತಿರುವ ಕಳ್ಳರ ಪತ್ತೆಯಲ್ಲಿ ಪೋಲೀಸರು ವಿಫಲರಾಗಿರುವ ಬಗ್ಗೆ ಜಿಗುಪ್ಸೆಗೊಂಡ ನಾಗರಿಕರು ಪೋಲೀಸರೇ ಕಳ್ಳರೊಂದಿಗೆ ಶಾಮೀಲಾಗಿರುವ ಶಂಕೆಯನ್ನೂ ವ್ಯಕ್ತಪಡಿಸುತ್ತಿರುವುದು ಕಂಡು ಬರುತ್ತಿದೆ.

ಪೋಲೀಸ್ ಬೀಟ್ ವ್ಯವಸ್ಥೆ ಬಿಗಿಗೊಳಿಸುವ ಮೂಲಕ ಇಲಾಖೆ ಜನರಲ್ಲಿ ನಂಬಿಕೆ ಮತ್ತು ಭರವಸೆ ಮೂಡಿಸಬೇಕಾಗಿದೆ.

ವಿಡಿಯೋ ವಶ

ಇಲ್ಲನ ವಿಡಿಯೊ ಕೇಂದ್ರದಲ್ಲಿ ಸೆನ್ಸಾರ್ ಸರ್ಟಿಫಿಕೇಟ್ ಇಲ್ಲದ ಅಕ್ರಮ ಕ್ಯಾಸೆಟ್ ಒಂದನ್ನು ('ಪಲ್ಲವಿ ಅನುಪಲ್ಲವಿ' ಚಿತ್ರದ್ದು) ಪ್ರದರ್ಶಿಸುತ್ತಿದ್ದ ದೂರಿನ ಮೇಲೆ ಪೋಲೀಸರು ಕ್ಯಾಸೆಟ್ ವಶಪಡಿಸಿಕೊಂಡು ಮಾಲೀಕ ಇಮ್ತಿಯಾಜ್‌ರನ್ನು ಬಂಧಿಸಿ ಜಾಮೀನು ಮೇಲೆ ಬಿಟ್ಟಿರುವುದಾಗಿಗೊತ್ತಾಗಿದೆ

ನಾರ್ವೆಗೆ ದೂರವಾಣಿ ಕೇಂದ್ರ

ಕೊಪ್ಪ: ಇಲ್ಲಿಗೆ ಸಮೀಪದ ನಾರ್ವೆಯಲ್ಲಿ 25 ಲೈನುಗಳ ದೂರವಾಣಿ ಕೇಂದ್ರ ಮಾರ್ಚ್‌ನಲ್ಲಿ ಆರಂಭವಾಗಲಿರುವುದಾಗಿ ವರದಿಯಾಗಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀಪಿಕೆ ಅಚ್ಚು ಕೂಟ, ಕೊಪ್ಪ.